# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೋಲಾರ ಜಿಲ್ಲೆ, ಕೋಲಾರ

ದಿನಾಂಕ:13/07/2016

## ಪ್ರಕರಣ ಸಂಖ್ಯೆ: ಆರ್‌ಎ. 57/2014-15

ಉಪಸ್ಥಿತರು: ಡಾ॥ ಕೆ.ವಿ.ತ್ರಿಲೋಕ್ ಚಂದ್ರ ಭಾ.ಆ.ಸೇ.,
ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

| ಮೇಲ್ಮನವಿದಾರರು | ವಿರುದ್ಧ | ಎದುರುದಾರರು |
|---|---|---|
| 1. ಶ್ರೀ ಗಂಟಾ ಜಯಪಾಲಪ್ಪ ಬಿನ್ ಲೇಟ್ ಓಬಣ್ಣ | | 1. ಸಹಾಯಕ ಕಮೀಷನರ್ ಕೋಲಾರ ಉಪವಿಭಾಗ |
| 2. ಮುನಿನಾರಾಯಣಪ್ಪ ಬಿನ್ ಲೇಟ್ ಮುನಿಶಾಮಪ್ಪ | | 2. ತಹಶೀಲ್ದಾರ್ ಕೋಲಾರ ತಾಲ್ಲೂಕು |
| 3. ಗಂಟಾ ಆನಂದಪ್ಪ ಬಿನ್ ಲೇಟ್ ಮುನಿಶಾಮಪ್ಪ | | 3. ಗ್ರಾಮಲೆಕ್ಕಾಧಿಕಾರಿಗಳು ಹೆಚ್.ಮಲ್ಲಾಂಡಹಳ್ಳಿ ಗ್ರಾಮ ಹುತ್ತೂರು ಹೋಬಳಿ ಕೋಲಾರ ತಾಲ್ಲೂಕು |
| 4. ಆಂಜನಪ್ಪ ಬಿನ್ ಲೇಟ್ ಮುನಿಶಾಮಪ್ಪ | | |
| 5. ಗಂಟಾ ಮುನಿಯಮ್ಮ ಕೋಂ ಲೇಟ್ ಲಕ್ಷ್ಮಯ್ಯ | | |
| 6. ಗಂಟಾ ಓಬಣ್ಣ ಬಿನ್ ಲೇಟ್ ವೆಂಕಟರವಣಪ್ಪ | | |
| 7. ಗಂಟಾ ವೆಂಕಟಾಚಲಪತಿ ಬಿನ್ ಲೇಟ್ ಗೋಪಾಲಪ್ಪ | | |
| 8. ಬಾಬು ಬಿನ್ ಲೇಟ್ ಗೋಪಾಲಪ್ಪ | | |
| 9. ಗಂಟಾ ನಾಗರಾಜ್ ಬಿನ್ ಲೇಟ್ ನಾರಾಯಣಪ್ಪ -ಎಲ್ಲರ ವಾಸ ಹೆಚ್.ಮಲ್ಲಾಂಡಹಳ್ಳಿ ಗ್ರಾಮ ಹುತ್ತೂರು ಹೋಬಳ ಕೋಲಾರ ತಾಲ್ಲೂಕು ( ಶ್ರೀ ಬಿ.ಎನ್.ವಾಸುದೇವಮೂರ್ತಿ -ವಕೀಲರು ರವರಿಂದ) | | |

ವಿಷಯ: ಕೋಲಾರ ತಾಲ್ಲೂಕು, ಹುತ್ತೂರು ಹೋಬಳಿ, ಮಲ್ಲಾಂಡಹಳ್ಳಿ ಗ್ರಾಮದ ಸ.ನಂ. 101/4, 9/2 ಮತ್ತು 32/3 ರ ಜಮೀನುಗಳ ಹಕ್ಕುದಾಖಲೆ ಸಂಖ್ಯೆ:ಎಂ.ಆರ್.ಹೆಚ್.18/2013-14 ರ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

0-0-0

**ಪ್ರಸ್ತಾವನೆ.**

ಈ ಮೇಲ್ಮನವಿ ಅರ್ಜಿಯನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 136(3) ರನ್ವಯ ಸಲ್ಲಿಸಿರುತ್ತಾರೆ.

**ಪ್ರಕರಣದ ಸಂಕ್ಷಿಪ್ತ ವಿವರ,**

ಕೋಲಾರ ತಾಲ್ಲೂಕು, ಹುತ್ತೂರು ಹೋಬಳಿ, ಮಲ್ಲಾಂಡಹಳ್ಳಿ ಗ್ರಾಮದ ಸ.ನಂ. 101/4, 9/2 ಮತ್ತು 32/3 ರ ಜಮೀನಿಗೆ ಸಂಬಂಧಿಸಿದ ಹಕ್ಕುದಾಖಲೆ ಕ್ರಮಾಂಕ:ಎಂ.ಆರ್.ಹೆಚ್.18/2013-14 ರ ಆದೇಶದ ಕ್ರಮಬದ್ಧತೆಯನ್ನು ಪ್ರಶ್ನಿಸಿ ಗಂಟಾ ಜಯಪಾಲಪ್ಪ ಬಿನ್ ಲೇಟ್ ಓಬಣ್ಣ ಮತ್ತು ಇತರರು ಈ ನ್ಯಾಯಾಲಯದಲ್ಲಿ ಸಲ್ಲಿಸಿರುವ ಮೇಲ್ಮನವಿ ಅರ್ಜಿಯನ್ನು ವಿಚಾರಣೆಗಾಗಿ ದಾಖಲಿಕೊಂಡಿದೆ. ಪ್ರಕರಣವನ್ನು ದಿನಾಂಕ:10/12/2014 ರಂದು ಪ್ರಕರಣವನ್ನು ವಿಚಾರಣೆಗಾಗಿ ತೆಗೆದುಕೊಂಡಾಗ ಮೇಲ್ಮನವಿದಾರರ ವಕೀಲರು ಹಾಜರು, ಪ್ರಕರಣವನ್ನು ಮುಂದೂಡಲಾಯ್ತು. ಸಾಕಷ್ಟು ಕಾಲಾವಕಾಶ ನೀಡಿ ವಿಚಾರಣೆ ಮಾಡಿದೆ. ದಿನಾಂಕ:12/08/2015 ರಂದು ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಲಾಯ್ತು.

...2

ಮೇಲ್ಮನವಿದಾರರು ತಮ್ಮ ಮೇಲ್ಮನವಿಯಲ್ಲಿ ಕೋಲಾರ ತಾಲ್ಲೂಕು, ಹುತ್ತೂರು ಹೋಬಳಿ, ಮಲ್ಲಾಂಡಹಳ್ಳಿ ಗ್ರಾಮದ ಜಮೀನುಗಳನ್ನು ದಿನಾಂಕ:15/10/2013 ರಂದು ಜುಬಾನೆ ವಿಭಾಗ ಪತ್ರ ಬರೆದುಕೊಂಡು ಇದರಂತೆ ಖಾತೆ ಮಾಡಲು ಕೋರಿ ಕೋಲಾರ ತಾಲ್ಲೂಕು ಕಂದಾಯ ಆದಾಲತ್ ಅಧಿಕಾರಿಗಳು ರವರಲ್ಲಿ ಮನವಿ ಸಲ್ಲಿಸಲಾಗಿತ್ತು. ಕಂದಾಯ ಆದಾಲತ್ ಅಧಿಕಾರಿಗಳ ಆದೇಶ ಸಂಖ್ಯೆ:ಎಸಿ/ಸಿಆರ್/125/2013-14 ದಿನಾಂಕ:20/12/2013 ರನ್ವಯ ಮಾಡಿರುವ ಮ್ಯುಟೇಷನ್ ಸಂಖ್ಯೆ:ಎಂ.ಆರ್.ಹೆಚ್18/2013-14 ರಲ್ಲಿ ಮಲ್ಲಾಂಡಹಳ್ಳಿ ಗ್ರಾಮದ ಸ.ನಂ. 9/2, 32/3 ಹಾಗೂ 101/4 ರ ಜಮೀನುಗಳನ್ನು ವಿಭಾಗ ಪತ್ರದಂತೆ ಖಾತೆ ಮಾಡಿರುವುದಿಲ್ಲ ಎಂದು ವಾದಿಸಿರುತ್ತಾರೆ. ಆದ್ದರಿಂದ ಸ.ನಂ. 9/2, 32/3 ಮತ್ತು 101/4 ಕ್ಕೆ ಸಂಬಂಧಿಸಿದ ಪ್ರಶ್ನಿತ ಎಂ.ಆರ್.ಹೆಚ್18/2013-14 ರ ಮ್ಯುಟೇಷನನ್ನು ರದ್ದುಪಡಿಸಿ ವಿಭಾಗ ಪತ್ರದಂತೆ ಖಾತೆ ಮಾಡಲು ಆದೇಶಿಸುವ ಮೂಲಕ ಮೇಲ್ಮನವಿಯನ್ನು ಪುರಸ್ಕರಿಸಲು ಕೋರಿರುತ್ತಾರೆ.

ಮೇಲ್ಮನವಿದಾರರ ವಾದ ಹಾಗೂ ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಲಾಗಿ ಕೋಲಾರ ತಾಲ್ಲೂಕು, ಹುತ್ತೂರು ಹೋಬಳಿ, ಮಲ್ಲಾಂಡಹಳ್ಳಿ ಗ್ರಾಮದ ಸ.ನಂ. 9/2, 32/3 ಮತ್ತು 101/4 ರಲ್ಲಿನ ಜಮೀನು ರಂಗಪ್ಪ ರವರ ಹೆಸರಿನಲ್ಲಿ ಇದ್ದು, ಮೇಲ್ಮನವಿದಾರರು ಸದರಿ ಜಮೀನುಗಳನ್ನು ದಿನಾಂಕ:15/10/2013 ರಂದು ನೋಂದಾಯಿತವಾಗದ ವಿಭಾಗ ಪತ್ರ ಮಾಡಿಕೊಂಡಿರುತ್ತಾರೆ. ವಿಭಾಗ ಪತ್ರದಂತೆ ಸ.ನಂ. 9/2 ರಲ್ಲಿ ಒಟ್ಟು 1-17 ಎಕರೆ ಜಮೀನು ಇದ್ದು, 6ನೇ ಹಾಗೂ 7ನೇ ಮೇಲ್ಮನವಿದಾರರ ಭಾಗಕ್ಕೆ ತಲಾ 0-28 ½ ಗುಂಟೆ ಹೋಗಿರುತ್ತೆ. ಸ.ನಂ. 32/3 ರಲ್ಲಿ ಒಟ್ಟು 1-07 ಎಕರೆ ಜಮೀನು ಇದ್ದು, 1ನೇ ಮೇಲ್ಮನವಿದಾರರಿಗೆ 0-06 ಗುಂಟೆ 4ನೇ ಮೇಲ್ಮನವಿದಾರರಿಗೆ 0-05 ಗುಂಟೆ, 5ನೇ ಮೇಲ್ಮನವಿದಾರರಿಗೆ 0-05 ಗುಂಟೆ, 6ನೇ ಮೇಲ್ಮನವಿದಾರರಿಗೆ 0-08 ಗಂಟೆ, 7ನೇ ಮೇಲ್ಮನವಿದಾರರಿಗೆ 0-07 ½ ಗುಂಟೆ ಹಾಗೂ 9ನೇ ಮೇಲ್ಮನವಿದಾರರಿಗೆ 0-15 ½ ಗುಂಟೆ ಯಂತೆ ಭಾಗ ಆಗಿರುತ್ತೆ. ಸ.ನಂ. 101/4 ರಲ್ಲಿನ ಒಟ್ಟು 0-04ವ ಗುಂಟೆಯಲ್ಲಿ 1, 3, 5 ಮತ್ತು 6ನೇ ಮೇಲ್ಮನವಿದಾರರಿಗೆ ತಲಾ 0-01 ಗುಂಟೆಯಂತೆ ಭಾಗ ಮಾಡಿಕೊಂಡಿರುತ್ತಾರೆ. ಇದರಂತೆ ಖಾತೆ ಮಾಡಲು ಕೋರಿ ದಿನಾಂಕ:20/12/2013 ರಂದು ಅದಾಲತ್ ಅಧಿಕಾರಿಗಳ ಮುಂದೆ ಅರ್ಜಿ ಸಲ್ಲಿಸಲಾಗಿ, ಅದಾಲತ್ ಆದೇಶ ಸಂಖ್ಯೆ:ಎಸಿ/ಸಿಆರ್/125/2013-14 ರನ್ವಯ ಮಾಡಿರುವ ಎಂ.ಆರ್18/2013-14 ರ ಮ್ಯುಟೇಷನ್ ವಿಭಾಗ ಪತ್ರದಂತೆ ಖಾತೆ ಆಗದಿರುವುದು ಕಂಡು ಬರುತ್ತದೆ.

## ಆದೇಶ

ಮೇಲ್ಮನವಿ ಅರ್ಜಿಯನ್ನು ಪುರಸ್ಕರಿಸಿದೆ. ಅದಾಲತ್ ಆದೇಶ ಕ್ರಮಾಂಕ:ಎಸಿ/ಸಿಆರ್/125/2013-14 ದಿನಾಂಕ:20/12/2013 ರಲ್ಲಿನ ಸ.ನಂ.9/2, 32/3 ಮತ್ತು 101/4 ಕ್ಕೆ ಸಂಬಂಧಿಸಿದ ಎಂ.ಆರ್18/2013-14 ರ ಖಾತೆಯನ್ನು ರದ್ದುಪಡಿಸಿದೆ. ವಿಭಾಗ ಪತ್ರದಂತೆ ಖಾತೆ ಮಾಡಲು ಕಾನೂನಿನಂತೆ ಕ್ರಮವಹಿಸಲು ತಹಶೀಲ್ದಾರ್, ಕೋಲಾರ ತಾಲ್ಲೂಕು ರವರಿಗೆ ನಿರ್ದೇಶಿಸಿ ಆದೇಶಿಸಿದೆ.

ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ಬೆರಳಚ್ಚು ಮಾಡಿಸಿ ಪರಿಷ್ಕರಿಸಿದೆ. ನಂತರ ದಿನಾಂಕ:13/07/2016 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಿದೆ.

ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

ನಕಲು ನಿಜಾಕೆ.

ಜಿಲ್ಲಾಧಿಕಾರಿಗಳ ಪರವಾಗಿ
ಕೋಲಾರ ಜಿಲ್ಲೆ.
18/7/16